# ಜೀವನದ ಮುಂದಿನ ಹೆಜ್ಜೆಗೆ ಕೀರ್ತಿಯ ಮಾರ್ಗದರ್ಶನ




■ ಹಿಂದಿ ಮೂಲ: ಶರದ್ ಸಿಂಗ್
■ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಕಲೆ: ಎಚ್.ಎಸ್. ಮೋನಪ್ಪ

'ಶಾಂಡಿಲಿ, ನನ್ನನ್ನು ಕ್ಷಮಿಸು, ನಾನು ನಿನ್ನನ್ನು ತುಂಬಾ ನೋಯಿಸಿದ್ದೇನೆ'– ಹೀಗೆಂದು ಕೌಶಿಕ ರೋದಿಸಿದ. ಅವನಿಗೆ ಈಗ ಜ್ಞಾನೋದಯವಾಯಿತು. ಅವನು ಹೆಣ್ಣಿನ ಶಕ್ತಿಯನ್ನು ಅರಿತ. 'ಈ ಕಥೆಗೆ ನಾನು ಹೊಸ ರೂಪವನ್ನು ಕೊಡಲು ಬಯಸುತ್ತೇನೆ. ಈ ಕಥೆಯ ಬಗ್ಗೆ ಈಗ ನಿಮ್ಮ ಅಭಿಪ್ರಾಯವನ್ನು ಹೇಳಿ', ವಿಶಾಲ್ ನನ್ನನ್ನು ಕೇಳಿದ.

'ವ್ಯರ್ಥದ ಕಥೆ'

'ಏಕೆ?'

'ಒಂದು ವೇಳೆ ಶಾಂಡಿಲಿಯಲ್ಲಿ, ಸೂರ್ಯ ಹುಟ್ಟುವುದನ್ನು ತಡೆಯುವ ಸಾಮರ್ಥ್ಯವಿದ್ದಿದ್ದರೆ, ಅವಳು ಮೊದಲು ತನ್ನ ಸಾಮರ್ಥ್ಯದಿಂದ ತನ್ನ ಪತಿಯ ಬುದ್ಧಿಯನ್ನು ಸುಧಾರಿಸಬೇಕಿತ್ತು', ನಾನು ನನ್ನ ಅಭಿಪ್ರಾಯವನ್ನು ಹೇಳಿದೆ.

'ವೆರಿ ಗುಡ್, ಮತ್ತೆ?'

'ಮತ್ತೇನು? ಕೌಶಿಕ್ ಒಪ್ಪದಿದ್ದಾಗಲೇ ಅವನನ್ನು ರಿಪೇರಿ ಮಾಡಬೇಕಿತ್ತು.'

'ಅಂದ್ರೆ ಕೌಶಿಕನನ್ನು ಥಳಿಸಬೇಕಿತ್ತು?'

'ಅಲ್ದೆ ಏನು?'

'ಇಂಟರೆಸ್ಟಿಂಗ್! ಮತ್ತೆ?'

'ನೀವು ಈ ನಾಟಕಕ್ಕೆ 'ಸತಿ ಮಹಾತ್ಮೆ' ಎಂದು ಹೆಸರು ಕೊಡಿ', ನಾನು ವ್ಯಂಗ್ಯವಾಡಿದೆ.

'ಇದರ ಅಂತ್ಯ?' ವಿಶಾಲ್ ಕೇಳಿದ.

'ನಾನಿದರ ಆಧುನಿಕ ಅಂತ್ಯವನ್ನು ಹೇಳಲೇ?' ನಾನು ಮುಗುಳ್ನಗುತ್ತಾ ಕೇಳಿದೆ.

'ಹೂಂ ಹೂಂ, ಅದಕ್ಕೇ ನಾನು ನಿಮಗೆ ಸಂಪೂರ್ಣ ಕಥೆಯನ್ನು ಹೇಳಿದ್ದೇನೆ. ನಾನು ನಿಮ್ಮಿಂದ ದಕ್ಷಿಣೆ ಪಡೆಯಲು 'ಸತ್ಯನಾರಾಯಣನ ಕಥೆ'ಯನ್ನಂತೂ ಓದುತ್ತಿರಲಿಲ್ಲ' ಎಂದ ವಿಶಾಲ್.

'ಅಂತ್ಯ ಏನಾಗಬೇಕೆಂದರೆ, ಶಾಂಡಿಲಿ ಕೌಶಿಕನಿಗೆ, 'ಒಂದು ವೇಳೆ ನಿಮಗೆ ನಿಮ್ಮ ಕಾರ್ಯಕ್ಕೆ ಪಶ್ಚಾತ್ತಾಪವಾಗಿದ್ದರೆ, ಈಗ ನೀವು ನನ್ನನ್ನು ನಿಮ್ಮ ಹೆಗಲ ಮೇಲೆ ಕೂರಿಸಿಕೊಂಡು ಪುರುಷ ವೇಶ್ಯೆಯ ಬಳಿಗೆ ಕರೆದುಕೊಂಡು ಹೋಗಿ ಎಂದು

